KAKD030018482023

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ರವರ ನ್ಯಾಯಾಲಯ, ಮಡಿಕೇರಿ.**

ಉಪಸ್ಥಿತರು

**ಶ್ರೀಮತಿ ವಿನುತ ಡಿ.ಎಸ್., ಬಿ.ಎಸ್‌ಸಿ (ಸೆರಿ), ಎಲ್.ಎಲ್.ಬಿ.,**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಮಡಿಕೇರಿ**

**ದಿನಾಂಕಃ 2ನೇ ಜೂನ್ 2026**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 1187/2023</u>**

**ಪಿರ್ಯಾದುದಾರರುಃ** ಸರ್ಕಾರದ ಪರ
ಕೊಡಗು ಮಹಿಳಾ ಪೊಲೀಸ್ ಠಾಣೆ

(ಸಹಾಯಕ ಸರ್ಕಾರಿ ಅಭಿಯೋಜಕ)

ವಿರುದ್ಧ

**ಆರೋಪಿಗಳುಃ**

1. ಹರೀಶ,
ತಂದೆಃ ಶಿವಪ್ಪ ಎಸ್ ಎಸ್,
ಪ್ರಾಯ 35 ವರ್ಷ,
ವಾಸಃ 1ನೇ ಮನೆ, 3ನೇ ಕ್ರಾಸ್, ಸಾಯಿ ಲೆಔಟ್,
4ನೇ ಬ್ಲಾಕ್, ಕುಶಾಲನಗರ ತಾಲ್ಲೂಕು.

2. ದೊಡ್ಡಮ್ಮ @ ಪಾರ್ವತಿ, ಗಂಡಃ ಶಿವಪ್ಪ ಎಸ್ ಎಸ್,
61 ವರ್ಷ, ವಾಸಃ ಕೂಡಿಗೆ ಗ್ರಾಮ ಮತ್ತು ಅಂಚೆ,
ಕುಶಾಲನಗರ.

3. ಶಿವಪ್ಪ ಎಸ್ ಎಸ್ (ಮೃತ ಪಟ್ಟಿರುತ್ತಾರೆ)

4. ಮಹೇಶ ಎಸ್ ಎಸ್, ತಂದೆಃ ಶಿವಪ್ಪ ಎಸ್ ಎಸ್,
28 ವರ್ಷ, ವಾಸಃ ಕೂಡಿಗೆ ಗ್ರಾಮ ಮತ್ತು ಅಂಚೆ,
ಕುಶಾಲನಗರ.

5. ಶಿಲ್ಪಾ ಎಸ್ ಎಸ್, ತಂದೆಃ ಶಿವಪ್ಪ ಎಸ್ ಎಸ್,
31 ವರ್ಷ, ಪಿರಿಯಾಪಟ್ಟಣ ನಗರ, ಮೈಸೂರು ಜಿಲ್ಲೆ.

6. ಗಿರೀಶ್ ಪಿ ಎಮ್, ತಂದೆಃ ಮುತ್ತಪ್ಪ ಪಿ ವೈ,
43 ವರ್ಷ, ವಾಸಃ ನಂ.840 ದೊಡ್ಡಬೀದಿ,
ಪಿರಿಯಾಪಟ್ಟಣ ನಗರ, ಮೈಸೂರು ಜಿಲ್ಲೆ.

**(ಆರೋಪಿ ಪರ ಶ್ರೀ ಕೆ.ಎ.ಕೆ.ಆರ್., ವಕೀಲರು)**

**–ಃ ತೀರ್ಪು ಃ-**

ಈ ಪ್ರಕರಣವನ್ನು ಆರಕ್ಷಕ ಉಪ ನಿರೀಕ್ಷಕರು, ಕೊಡಗು ಮಹಿಳಾ ಪೊಲೀಸ್ ಠಾಣೆ ಇವರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 498(ಎ), 323, 324, 504, 506, 114 ಸಹವಾಚಕ ಕಲಂ 34 ಹಾಗೂ ಕಲಂ 3 ಮತ್ತು 4 ವರದಕ್ಷಿಣೆ ನಿಷೇಧಾ ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕಾಗಿ ಸಲ್ಲಿಸಿರುತ್ತಾರೆ.

**2. <u>ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ</u>**

1ನೇ ಆರೋಪಿಯು ಆರೋಪಿ-2 ಹಾಗೂ ಮೃತ 3ನೇ ಆರೋಪಿಯ ಮಗನಾಗಿದ್ದು 1ನೇ ಆರೋಪಿಯು ಚಾಸಾ-1 ಸೌಮ್ಯಾ ರವರನ್ನು ದಿನಾಂಕ 17.05.2019 ರಂದು ಕುಶಾಲನಗರದ ಮಾರುತಿ ಕಲ್ಯಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯಂತೆ ಗುರುಹಿರಿಯರ ಮತ್ತು ಸಂಬಂಧಿಕರ ಸಮ್ಮುಖದಲ್ಲಿ ಮದುವೆಯಾಗಿದ್ದು ಸುಮಾರು 9 ತಿಂಗಳ ಕಾಲ ಚೆನ್ನಾಗಿ ನೋಡಿಕೊಂಡು ನಂತರದ ದಿನಗಳಲ್ಲಿ ವರದಕ್ಷಿಣೆ ತರುವಂತೆ ಒತ್ತಾಯಿಸುತ್ತಾ ವರದಕ್ಷಿಣೆ ತರದಿದ್ದಲ್ಲಿ ಮನೆ ಬಿಟ್ಟು ಹೋಗು ಎಂದು ಜಗಳ ತೆಗೆಯುತ್ತಾ ಚಾಸಾ-1 ರವರಿಗೆ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆಯನ್ನು ನೀಡುತ್ತಿದ್ದು ದಿನಾಂಕ 14.02.2020 ರಂದು ರಾತ್ರಿ 9-00 ಗಂಟೆಗೆ ಕೂಡಿಗೆ ಗ್ರಾಮದಲ್ಲಿ 2ನೇ ಆರೋಪಿತೆಯ ವಾಸದ ಮನೆಯಲ್ಲಿ ಚಾಸಾ-1 ರವರ ಆಧಾರ್ ಕಾರ್ಡ್ ಕೊಡಲು ತಡವಾದ ವಿಚಾರದ ಬಗ್ಗೆ 2 ರಿಂದ 5ನೇ ಆರೋಪಿಗಳು ಚಾಸಾ-1 ರವರೊಡನೆ ಜಗಳ ತೆಗೆದಿದ್ದು ಅ ಸಮಯದಲ್ಲಿ 2ನೇ ಆರೋಪಿತೆಯು ಚಾಸಾ-1, ಚಾಸಾ-2 ಹಾಗೂ ಚಾಸಾ-3 ರವರನ್ನು ಉದ್ದೇಶಿಸಿ ಬೇವರ್ಸಿ ಮುಂಡೆಯರು, ಸೂಳೇ ಮಗ ಎಂದು ಹಾಗೂ ದಿನಾಂಕ 18.05.2020 ರಂದು ಚಾಸಾ-1 ರಿಂದ 3 ರವರಿಗೆ ಸೂಳೆಯರಿಗೆ ಹುಟ್ಟಿದ ಮಕ್ಕಳು ಎಂದು ಹಾಗೂ 2020 ನೇ ಇಸವಿ ಮೇ ತಿಂಗಳ ಕೊನೆಯ ವಾರದಲ್ಲಿ ಒಂದು ದಿನ ಸಂಜೆ 6-45 ಗಂಟೆಗೆ ಚಾಸಾ-2 ಮತ್ತು 3 ರವರು ವಾಸವಿರುವ ಚಾಸಾ-9 ರವರಿಗೆ ಸೇರಿದ

ಮನೆಯಲ್ಲಿ ಸಂಜೆ 7-00 ಗಂಟೆಗೆ 5ನೇ ಹಾಗೂ 6ನೇ ಆರೋಪಿಗಳು ಚಾಸಾ-1 ರವರಿಗೆ ಬೇವರ್ಸಿ ಮುಂಡೆ, ಚಾಸಾ-2 ರವರಿಗೆ ಲೋಫರ್ ಇದ್ದೀಯಾ ಕಚ್ಚಡ ನನ್ನ ಮಗ ಸೂಳೆಗೆ ಹುಟ್ಟಿದ್ದೀಯ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಮುಂದುವರೆದು ದಿನಾಂಕ 18.05.2020 ರಾತ್ರಿ 9-00 ಗಂಟೆಗೆ ಕುಶಾಲನಗರದ ಸಾಯಿ ಬಡಾವಣೆಯಲ್ಲಿ 2ನೇ ಆರೋಪಿತೆಗೆ ಸೇರಿದ ಚಾಸಾ-1 ರವರು ವಾಸ ಮಾಡುವ ಮನೆಯಲ್ಲಿ 1ನೇ ಆರೋಪಿಯು ಚಾಸಾ-1 ರವರ ಜೊತೆ ಜಗಳ ತೆಗೆದು ಮನೆ ಕ್ಲೀನ್ ಮಾಡಲು ಮತ್ತು 1ನೇ ಆರೋಪಿ ಮತ್ತು ಅತನ ಸ್ನೇಹಿತರ ಒಳ ಉಡುಪುಗಳನ್ನು ಒಗೆಯಲು ಹೇಳಿ ಹಿಂಸೆ ನೀಡಿದ್ದು ಇದಕ್ಕೆ ಚಾಸಾ-1 ರವರು ಒಪ್ಪದಿದ್ದಾಗ ಚಾಸಾ-1 ರವರ ಕೆನ್ನೆಗೆ ಕೈಯಿಂದ ಹೊಡೆದು ಕಾಲಿನಿಂದ ಸೊಂಟಕ್ಕೆ ಒದ್ದು ನೋವು ಪಡಿಸಿದ್ದು ಹಾಗೂ ನಂತರ 2020ನೇ ಇಸವಿ ಜೂನ್ ತಿಂಗಳ 2ನೇ ವಾರದಲ್ಲಿ ಒಂದು ದಿನ ಸಂಜೆ 7-00 ಗಂಟೆಗೆ ಕೂಡಿಗೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಡುವ 2ನೇ ಆರೋಪಿತೆಗೆ ಸೇರಿದ ವಾಸದ ಮನೆಯಲ್ಲಿ 2 ರಿಂದ 6ನೇ ಆರೋಪಿಗಳು ಚಾಸಾ-1 ರವರಿಗೆ ಇಲ್ಲಿಗೆ ಯಾಕೆ ಬಂದೆ ಎನ್ನುತ್ತಾ 6ನೇ ಆರೋಪಿಯು ಚಾಸಾ-1 ರವರನ್ನು ಕುರಿತು ನಾವು ಎಷ್ಟೇ ಹಿಂಸೆ ಕೊಟ್ಟರೂ ಅದನ್ನೆಲ್ಲಾ ಸಹಿಸಿಕೊಳ್ಳಬೇಕು, ಒಂದು ವೇಳೆ ನಾವು ನಿನ್ನನ್ನು ಸಾಯಿಸಿದರೂ ನೀನು ಸಾಯಬೇಕು ಎಂದು ಹೇಳಿ ಚಾಸಾ-1 ರವರ ಕೈಯ್ಯನ್ನು ಹಿಡಿದು ಎಳೆದಾಡಿ ಬೆನ್ನಿಗೆ, ಎಡ ರಟ್ಟೆಗೆ, ಕೆನ್ನೆಗೆ ಹೊಡೆದು ಸೊಂಟಕ್ಕೆ ಒದ್ದು ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿದ್ದು 1ನೇ ಆರೋಪಿ ಹಾಗೂ ಅತನ ಸ್ನೇಹಿತರು ಮದ್ಯಪಾನ ಮಾಡಿ ಬಿಟ್ಟಿದ್ದ ಗಾಜಿನ ಲೋಟಗಳನ್ನು ಒಡೆದು ಹಾಕಿ ಆ ಗಾಜಿನಲ್ಲಿ ಚಾಸಾ-1 ರವರನ್ನು ಹಲ್ಲೆ ಮಾಡಲು ಮುಂದಾದಾಗ ಚಾಸಾ-1 ರವರ ಎರಡು ಕೈಯ್ಯ ಬೆರಳುಗಳಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು ನಂತರ ದಿನಾಂಕ 18.05.2020 ರಂದು ರಾತ್ರಿ 9-00 ಗಂಟೆ ಸಮಯದಲ್ಲಿ ಚಾಸಾ-1 ರಿಂದ 3 ರವರನ್ನು ಕೊಲ್ಲುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಮುಂದುವರೆದು 2 ರಿಂದ 5ನೇ ಆರೋಪಿಗಳು 1ನೇ ಆರೋಪಿಗೆ ಚಾಸಾ-1 ರವರಿಗೆ ಹೊಡೆದು ಹಿಂಸೆ ನೀಡು ಆಗ ಅವಳು ಮನೆ ಬಿಟ್ಟು ಹೋಗುತ್ತಾಳೆ ಎಂದು 1ನೇ ಆರೋಪಿಗೆ ಚಾಸಾ-1 ರವರ ಮೇಲೆ ಹಲ್ಲೆ ಮಾಡುವಂತೆ ಕುಮ್ಮಕ್ಕು ನೀಡುತ್ತಿದ್ದು ನಂತರ ದಿನಾಂಕ 18.05.2020 ರಂದು ರಾತ್ರಿ 9-00 ಗಂಟೆ ಸಮಯದಲ್ಲಿ ಚಾಸಾ-1 ರಿಂದ 3 ರವರನ್ನು ಕೊಲ್ಲುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ್ದು ಅಲ್ಲದೇ 1ನೇ ಆರೋಪಿಯು ಚಾಸಾ-1 ರವರಿಗೆ 'ಮನೆ ಬಿಟ್ಟು ಹೋಗು, ನೀನು ಮನೆ ಬಿಟ್ಟು ಹೋಗದೇ ಇದ್ದರೆ ಐದು ಜನರನ್ನು ಕರೆಯಿಸಿ ನಿನ್ನ ಮೇಲೆ ಅತ್ಯಾಚಾರ ಮಾಡಿಸಿ ನಿನ್ನ ಮೈ ಮೇಲೆ ಇರುವ ಬಟ್ಟೆಯನ್ನು ತೆಗೆದು ನಿನ್ನನ್ನು ಬರಿ ಮೈಯ್ಯಲ್ಲಿ ರಸ್ತೆಯಲ್ಲಿ ನಿಲ್ಲಿಸುತ್ತೇನೆ' ಎಂದು ಮಾನಸಿಕ ಹಿಂಸೆ ನೀಡಿ ಕೊಲೆ ಬೆದರಿಕೆ ಹಾಕಿರುತ್ತಾರೆ ಹಾಗೂ ಆರೋಪಿಗಳು ಚಾಸಾ-1 ರವರಿಗೆ ವರದಕ್ಷಿಣೆ ತರುವಂತೆ ಒತ್ತಾಯಿಸುತ್ತಾ ಚಾಸಾ-1 ರವರಿಗೆ ಹಿಂಸೆ ನೀಡಿರುತ್ತಾರೆ ಎಂದು ಆಪಾದಿಸಲಾಗಿದೆ.

3. ಚಾಸಾ-1 ರವರು ಸಲ್ಲಿಸಿರುವ ದೂರಿನ ಆಧಾರದಲ್ಲಿ ಸುಂಟಿಕೊಪ್ಪ ಪೊಲೀಸ್ ಠಾಣೆ ಗುನ್ನ ನಂ.5/2023 ರಲ್ಲಿ ಭಾರತೀಯ ದಂಡ ಸಂಹಿತೆ ಕಲಂ 498(ಎ), 323, 324, 504, 506, 114 ಸಹವಾಚಕ ಕಲಂ 34 ಹಾಗೂ ಕಲಂ 3 ಮತ್ತು 4 ವರದಕ್ಷಿಣೆ ನಿಷೇಧಾ ಕಾಯ್ದೆರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ.

4. ತನಿಖಾಧಿಕಾರಿಯು ಆರೋಪಿಗಳ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಆರೋಪಿಗಳು ತಮ್ಮ ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮಿನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 207ರ ಅನುಸಾರ ಒದಗಿಸಲಾಗಿದೆ. ಪ್ರಕರಣವು ಆರೋಪಣೆಯನ್ನು ರಚಿಸುವ ಹಂತದಲ್ಲಿರುವಾಗ ದಿನಾಂಕ 23.04.2025 ರಂದು ಆರೋಪಿಗಳ ಪರ ವಕೀಲರು ಹಾಜರಾಗಿ ಈ ಪ್ರಕರಣದ 3ನೇ ಆರೋಪಿ ಶಿವಪ್ಪ ರವರು ಮೃತ ಪಟ್ಟಿರುವುದಾಗಿ ಮೆಮೊ ಸಲ್ಲಿಸಿರುತ್ತಾರೆ. ಆದಕಾರಣ 3ನೇ ಆರೋಪಿಯ ವಿರುದ್ದ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ನಂತರ ವಾದ ವಿವಾದವನ್ನು ಕೇಳಿ ಉಳಿದ ಆರೋಪಿಗಳ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 498(ಎ), 323, 324, 504, 506 ಮತ್ತು 114 ಸಹವಾಚಕ ಕಲಂ 34 ಹಾಗೂ ಕಲಂ 3 ಮತ್ತು 4 ವರದಕ್ಷಿಣೆ ನಿಷೇಧಾ ಕಾಯ್ದೆ ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪಣೆಯನ್ನು ಸಿದ್ಧಪಡಿಸಿ ಅವರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಅವರು ಆರೋಪಣೆಯನ್ನು ಅಲ್ಲಗಳೆದಿರುತ್ತಾರೆ. ನ್ಯಾಯಾಲಯವು ಅಭಿಯೋಜನೆಯ ಸಾಕ್ಷಿದಾರರ ವಿಚಾರಣೆಗಾಗಿ ಸಮನ್ಸನ್ನು ಹೊರಡಿಸಿರುತ್ತದೆ.

5. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಬೀತುಪಡಿಸಲು, ಈ ಪ್ರಕರಣದ ದೂರುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು, ನಿಪಿ-1 ರಿಂದ ನಿಪಿ-7 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಪ್ರಾಸಾ-01 ರವರು ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ನ್ಯಾಯಾಲಯವು ಉಳಿದ ಸಾಕ್ಷಿಗಳ ವಿಚಾರಣೆಯನ್ನು ಮಾಡಿದರೆ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯವಾಗುವುದಿಲ್ಲ ಎಂದು ಪರಿಗಣಿಸಿ ಹಾಗೂ ನ್ಯಾಯಾಲಯದ ಸಮಯವನ್ನು ಉಳಿಸುವುದಕೋಸ್ಕರ ಉಳಿದ ಸಾಕ್ಷಿಗಳನ್ನು ವಿಚಾರಣೆಯಿಂದ ಕೈಬಿಡಲಾಗಿದೆ.

6. ನ್ಯಾಯಾಲಯವು ಕಡತವನ್ನು ಪರಿಶೀಲಿಸಿದಾಗ ಆರೋಪಿಗಳ ವಿರುದ್ಧ ಯಾವುದೇ ಸೂಕ್ತವಾದ ಪ್ರಚೋದನಕಾರಿ ಸಾಕ್ಷ್ಯಾಧಾರಗಳು ಇಲ್ಲದೇ ಇರುವುದರಿಂದ ಬಿ.ಎನ್.ಎಸ್.ಎಸ್. ಕಲಂ 351 ರಡಿಯಲ್ಲಿ ಆರೋಪಿಗಳ ಹೇಳಿಕೆ ಪಡೆದುಕೊಳ್ಳುವುದನ್ನು ಕೈ ಬಿಡಲಾಗಿದೆ.

7. ಈ ಮೇಲೆ ಹೇಳಿದ ಪ್ರಕರಣದ ವಸ್ತುಸ್ಥಿತಿಯ ಆಧಾರದ ಮೇಲೆ ನ್ಯಾಯಾಲಯವು ಈ ಕೆಳಕಂಡ ಅಂಶಗಳನ್ನು ನಿರ್ಧರಿಸಬೇಕಾಗಿರುತ್ತದೆ.

1. 1ನೇ ಆರೋಪಿಯು ಆರೋಪಿ-2 ಹಾಗೂ ಮೃತ 3ನೇ ಆರೋಪಿಯ ಮಗನಾಗಿದ್ದು 1ನೇ ಆರೋಪಿಯು ಚಾಸಾ-1 ಸೌಮ್ಯಾ ರವರನ್ನು ದಿನಾಂಕ 17.05.2019 ರಂದು ಕುಶಾಲನಗರದ ಮಾರುತಿ ಕಲ್ಯಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯಂತೆ ಗುರುಹಿರಿಯರ ಮತ್ತು ಸಂಬಂಧಿಕರ ಸಮ್ಮುಖದಲ್ಲಿ ಮದುವೆಯಾಗಿದ್ದು ಸುಮಾರು 9 ತಿಂಗಳ ಕಾಲ ಚೆನ್ನಾಗಿ ನೋಡಿಕೊಂಡು ನಂತರದ ದಿನಗಳಲ್ಲಿ ವರದಕ್ಷಿಣೆ ತರುವಂತೆ ಒತ್ತಾಯಿಸುತ್ತಾ ವರದಕ್ಷಿಣೆ ತರದಿದ್ದಲ್ಲಿ ಮನೆ ಬಿಟ್ಟು ಹೋಗು ಎಂದು ಜಗಳ ತೆಗೆಯುತ್ತಾ ಚಾಸಾ-1 ರವರಿಗೆ ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆಯನ್ನು ನೀಡುತ್ತಿದ್ದು ಆ ಮೂಲಕ ಆರೋಪಿಗಳು ಭಾ.ದಂ.ಸಂ. ಕಲಂ 498ಎ ಸಹವಾಚಕ 34 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

2. ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ದಿನಾಂಕ 14.02.2020 ರಂದು ರಾತ್ರಿ 9-00 ಗಂಟೆಗೆ ಕೂಡಿಗೆ ಗ್ರಾಮದಲ್ಲಿ 2ನೇ ಆರೋಪಿತೆಯ ವಾಸದ ಮನೆಯಲ್ಲಿ ಚಾಸಾ-1 ರವರ ಆಧಾರ್ ಕಾರ್ಡ್ ಕೊಡಲು ತಡವಾದ ವಿಚಾರದ ಬಗ್ಗೆ 2 ರಿಂದ 5ನೇ ಆರೋಪಿಗಳು ಚಾಸಾ-1 ರವರೊಡನೆ ಜಗಳ ತೆಗೆದಿದ್ದು ಅ ಸಮಯದಲ್ಲಿ 2ನೇ ಆರೋಪಿತೆಯು ಚಾಸಾ-1, ಚಾಸಾ-2 ಹಾಗೂ ಚಾಸಾ-3 ರವರನ್ನು ಉದ್ದೇಶಿಸಿ ಬೇವರ್ಸಿ ಮುಂಡೆಯರು, ಸೂಳೇ ಮಗ ಎಂದು ಹಾಗೂ ದಿನಾಂಕ 18.05.2020 ರಂದು ಚಾಸಾ-1 ರಿಂದ 3 ರವರಿಗೆ ಸೂಳೆಯರಿಗೆ ಹುಟ್ಟಿದ ಮಕ್ಕಳು ಎಂದು ಹಾಗೂ 2020 ನೇ ಇಸವಿ ಮೇ ತಿಂಗಳ ಕೊನೆಯ ವಾರದಲ್ಲಿ ಒಂದು ದಿನ ಸಂಜೆ 6-45 ಗಂಟೆಗೆ ಚಾಸಾ-2 ಮತ್ತು 3 ರವರು ವಾಸವಿರುವ ಚಾಸಾ-9 ರವರಿಗೆ ಸೇರಿದ ಮನೆಯಲ್ಲಿ ಸಂಜೆ 7-00 ಗಂಟೆಗೆ 5ನೇ ಹಾಗೂ 6ನೇ ಆರೋಪಿಗಳು ಚಾಸಾ-1 ರವರಿಗೆ ಬೇವರ್ಸಿ ಮುಂಡೆ, ಚಾಸಾ-2 ರವರಿಗೆ ಲೋಪರ್ ಇದ್ದೀಯಾ ಕಚ್ಚಡ ನನ್ನ ಮಗ ಸೂಳೆಗೆ ಹುಟ್ಟಿದ್ದೀಯ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗ ಉಂಟಾಗುವಂತೆ ಮಾಡಲು

ಪ್ರಚೋದಿಸಿದ್ದು ಆ ಮೂಲಕ ಆರೋಪಿಗಳು ಭಾ.ದಂ.ಸಂ. ಕಲಂ 504 ಸಹವಾಚಕ 34 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

3. ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ದಿನಾಂಕ 18.05.2020 ರಾತ್ರಿ 9-00 ಗಂಟೆಗೆ ಕುಶಾಲನಗರದ ಸಾಯಿ ಬಡಾವಣೆಯಲ್ಲಿ 2ನೇ ಆರೋಪಿತೆಗೆ ಸೇರಿದ ಚಾಸಾ-1 ರವರು ವಾಸ ಮಾಡುವ ಮನೆಯಲ್ಲಿ 1ನೇ ಆರೋಪಿಯು ಚಾಸಾ-1 ರವರ ಜೊತೆ ಜಗಳ ತೆಗೆದು ಮನೆ ಕ್ಲೀನ್ ಮಾಡಲು ಮತ್ತು 1ನೇ ಆರೋಪಿ ಮತ್ತು ಅತನ ಸ್ನೇಹಿತರ ಒಳ ಉಡುಪುಗಳನ್ನು ಒಗೆಯಲು ಹೇಳಿ ಹಿಂಸೆ ನೀಡಿದ್ದು ಇದಕ್ಕೆ ಚಾಸಾ-1 ರವರು ಒಪ್ಪದಿದ್ದಾಗ ಚಾಸಾ-1 ರವರ ಕೆನ್ನೆಗೆ ಕೈಯಿಂದ ಹೊಡೆದು ಕಾಲಿನಿಂದ ಸೊಂಟಕ್ಕೆ ಒದ್ದು ನೋವು ಪಡಿಸಿದ್ದು ಹಾಗೂ ನಂತರ 2020ನೇ ಇಸವಿ ಜೂನ್ ತಿಂಗಳ 2ನೇ ವಾರದಲ್ಲಿ ಒಂದು ದಿನ ಸಂಜೆ 7-00 ಗಂಟೆಗೆ ಕೂಡಿಗೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಡುವ 2ನೇ ಆರೋಪಿತೆಗೆ ಸೇರಿದ ವಾಸದ ಮನೆಯಲ್ಲಿ 2 ರಿಂದ 6ನೇ ಆರೋಪಿಗಳು ಚಾಸಾ-1 ರವರಿಗೆ ಇಲ್ಲಿಗೆ ಯಾಕೆ ಬಂದೆ ಎನ್ನುತ್ತಾ 6ನೇ ಆರೋಪಿಯು ಚಾಸಾ-1 ರವರನ್ನು ಕುರಿತು ನಾವು ಎಷ್ಟೇ ಹಿಂಸೆ ಕೊಟ್ಟರೂ ಅದನ್ನೆಲ್ಲಾ ಸಹಿಸಿಕೊಳ್ಳಬೇಕು, ಒಂದು ವೇಳೆ ನಾವು ನಿನ್ನನ್ನು ಸಾಯಿಸಿದರೂ ನೀನು ಸಾಯಬೇಕು ಎಂದು ಹೇಳಿ ಚಾಸಾ-1 ರವರ ಕೈಯ್ಯನ್ನು ಹಿಡಿದು ಎಳೆದಾಡಿ ಬೆನ್ನಿಗೆ, ಎಡ ರಟ್ಟೆಗೆ, ಕೆನ್ನೆಗೆ ಹೊಡೆದು ಸೊಂಟಕ್ಕೆ ಒದ್ದು ಹಲ್ಲೆ ಮಾಡಿದ್ದು ಆ ಮೂಲಕ ಆರೋಪಿಗಳು ಭಾ.ದಂ.ಸಂ. ಕಲಂ 323 ಸಹವಾಚಕ 34 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

4. ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ 1ನೇ ಆರೋಪಿ ಹಾಗೂ ಅತನ ಸ್ನೇಹಿತರು ಮದ್ಯಪಾನ

ಮಾಡಿ ಬಿಟ್ಟಿದ್ದ ಗಾಜಿನ ಲೋಟಗಳನ್ನು ಒಡೆದು ಹಾಕಿ ಆ ಗಾಜಿನಲ್ಲಿ ಚಾಸಾ-1 ರವರನ್ನು ಹಲ್ಲೆ ಮಾಡಲು ಮುಂದಾದಾಗ ಚಾಸಾ-1 ರವರ ಎರಡು ಕೈಯ್ಯ ಬೆರಳುಗಳಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು ಆ ಮೂಲಕ ಆರೋಪಿಗಳು ಭಾ.ದಂ.ಸಂ. ಕಲಂ 324 ಸಹವಾಚಕ 34 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

5. ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ಆರೋಪಿಗಳು ದಿನಾಂಕ 18.05.2020 ರಂದು ರಾತ್ರಿ 9-00 ಗಂಟೆ ಸಮಯದಲ್ಲಿ ಚಾಸಾ-1 ರಿಂದ 3 ರವರನ್ನು ಕೊಲ್ಲುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ್ದು ಅಲ್ಲದೇ 1ನೇ ಆರೋಪಿಯು ಚಾಸಾ-1 ರವರಿಗೆ ಮನೆ ಬಿಟ್ಟು ಹೋಗು, ನೀನು ಮನೆ ಬಿಟ್ಟು ಹೋಗದೇ ಇದ್ದರೆ ಐದು ಜನರನ್ನು ಕರೆಯಿಸಿ ನಿನ್ನ ಮೇಲೆ ಅತ್ಯಾಚಾರ ಮಾಡಿಸಿ ನಿನ್ನ ಮೈ ಮೇಲೆ ಇರುವ ಬಟ್ಟೆಯನ್ನು ತೆಗೆದು ನಿನ್ನನ್ನು ಬರಿ ಮೈಯ್ಯಲ್ಲಿ ರಸ್ತೆಯಲ್ಲಿ ನಿಲ್ಲಿಸುತ್ತೇನೆ ಎಂದು ಮಾನಸಿಕ ಹಿಂಸೆ ನೀಡಿ ಕೊಲೆ ಬೆದರಿಕೆ ಹಾಕಿದ್ದು ಆ ಮೂಲಕ ಆರೋಪಿಗಳು ಭಾ.ದಂ.ಸಂ. ಕಲಂ 506 ಸಹವಾಚಕ 34 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

6. ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ 2 ರಿಂದ 5ನೇ ಆರೋಪಿಗಳು 1ನೇ ಆರೋಪಿಗೆ ಚಾಸಾ-1 ರವರಿಗೆ ಹೊಡೆದು ಹಿಂಸೆ ನೀಡು ಆಗ ಅವಳು ಮನೆ ಬಿಟ್ಟು ಹೋಗುತ್ತಾಳೆ ಎಂದು 1ನೇ ಆರೋಪಿಗೆ ಚಾಸಾ-1 ರವರ ಮೇಲೆ ಹಲ್ಲೆ ಮಾಡುವಂತೆ ಕುಮ್ಮಕ್ಕು ನೀಡುತ್ತಿದ್ದು ಆ ಮೂಲಕ ಆರೋಪಿಗಳು ಭಾ.ದಂ.ಸಂ. ಕಲಂ 114 ಸಹವಾಚಕ 34 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

7. ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗ ಉಂಟಾಗುವಂತೆ ಮಾಡಲು ಪ್ರಚೋದಿಸಿದ್ದು ಆ ಮೂಲಕ ಆರೋಪಿಗಳು ಕಲಂ 3 ಮತ್ತು 4 ವರದಕ್ಷಿಣೆ ನಿಷೇಧಾ ಕಾಯ್ದೆ ಯಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯು ನಿಸ್ಸಂಶಯವಾಗಿ ಸಾಬೀತುಪಡಿಸುವುದೇ?

8. ಯಾವ ಆದೇಶ?

8. ಮೇಲ್ಕಂಡ ಅಂಶಗಳಿಗೆ ಈ ಕೆಳಗೆ ಕಾಣಿಸಿದ ನನ್ನ ಉತ್ತರ ಈ ಕೆಳಗಿನಂತಿರುತ್ತದೆ.

| | |
|---|---|
| ಅಂಶ-1: | ನಕಾರಾತ್ಮಕವಾಗಿ, |
| ಅಂಶ-2: | ನಕಾರಾತ್ಮಕವಾಗಿ, |
| ಅಂಶ-3: | ನಕಾರಾತ್ಮಕವಾಗಿ, |
| ಅಂಶ-4: | ನಕಾರಾತ್ಮಕವಾಗಿ, |
| ಅಂಶ-5: | ನಕಾರಾತ್ಮಕವಾಗಿ, |
| ಅಂಶ-6: | ನಕಾರಾತ್ಮಕವಾಗಿ, |
| ಅಂಶ-7: | ನಕಾರಾತ್ಮಕವಾಗಿ, |
| ಅಂಶ-8: | ಅಂತಿಮ ಆದೇಶದಂತೆ<br>ಕೆಳಕಂಡ ಕಾರಣಗಳ ಪ್ರಕಾರ |

## ಕಾರಣಗಳು

9. **ಅಂಶ-1 ರಿಂದ 7-** ಸಾಕ್ಷ್ಯ ಹಾಗೂ ಕಾರಣಗಳ ಪುನರಾವರ್ತನೆಯನ್ನು ತಡೆಯುವುದಕೋಸ್ಕರ ಈ ಮೇಲಿನ ಅಂಶಗಳನ್ನು ನ್ಯಾಯಾಲಯವು ಒಟ್ಟಿಗೆ ಚರ್ಚಿಸಿರುತ್ತದೆ.

10. ಅಭಿಯೋಜನೆಯು ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ-1 ಸೌಮ್ಯ ರವರನ್ನು ಪ್ರಾಸಾ-1ರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-2 ತನ್ನ ತಂದೆ, ಚಾಸಾ-3 ತನ್ನ ತಾಯಿ, ಚಾಸಾ-4 ತನ್ನ ಅಕ್ಕ, ಚಾಸಾ-5 ತನ್ನ ಬಾವ, ಚಾಸಾ-8 ರಿಂದ 18 ತನಗೆ ಗೊತ್ತು, 1ನೇ ಆರೋಪಿ ತನ್ನ ಗಂಡ, 2 ಆರೋಪಿ

ತನ್ನ ಅತ್ತೆ, 3ನೇ ಆರೋಪಿ ತನ್ನ ಮಾವ, 4ನೇ ಆರೋಪಿ ತನ್ನ ಬಾವ, 5ನೇ ಆರೋಪಿ ತನ್ನ ಅತ್ತಿಗೆ, 6ನೇ ಆರೋಪಿ 5ನೇ ಆರೋಪಿಯ ಅಣ್ಣ, ತನ್ನ ಮದುವೆ 1ನೇ ಆರೋಪಿಯ ಜೊತೆ ದಿಃ 17.05.2019 ರಂದು ಕುಶಾಲನಗರದ ಮಾರುತಿ ಕಲ್ಯಾಣ ಮಂಟಪದಲ್ಲಿ ಹಿಂದೂ ಸಂಪ್ರದಾಯದಂತೆ ನಡೆದಿದ್ದು, ಮದುವೆಯಾದ ಮೇಲೆ ತಾನು ಆರೋಪಿ 1 ರಿಂದ 3 ರವರ ಮನೆಯಲ್ಲಿ ವಾಸವಾಗಿದ್ದು, ತನ್ನ ವೈವಾಹಿಕ ಜೀವನದಲ್ಲಿ ತನ್ನ ಮತ್ತು ಆರೋಪಿತರ ನಡುವೆ ಸಣ್ಣ ಪುಟ್ಟ ವಿಚಾರವಾಗಿ ಮಾತುಕತೆ ಆಗಿದ್ದು, ಅದನ್ನು ಬಗೆಹರಿಸಿಕೊಳ್ಳಲು ತಾವು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು 6 ದಾಖಲೆಗಳಿಗೆ ತನ್ನ ಸಹಿ ಪಡೆದಿದ್ದು, ಇದರ ಹೊರತಾಗಿ ಆರೋಪಿತರು ಮತ್ತು ತನ್ನ ನಡುವೆ ಯಾವುದೇ ಗಲಾಟೆ ಆಗಿಲ್ಲ, ಆರೋಪಿತರು ತನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿಲ್ಲ, ವರದಕ್ಷಿಣೆ ಕಿರುಕುಳ ನೀಡಿಲ್ಲ, ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ಧಗಳಿಂದ ನಿಂದಿಸಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ತಾನು ಪೊಲೀಸರಿಗೆ ಆರೋಪಿತರ ವಿರುದ್ಧ ದೂರು ನೀಡಿಲ್ಲ ಹಾಗೂ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸಾಕ್ಷಿಯು ದೂರನ್ನು ನಿಪಿ-1 ಎಂದು, ಮಹಜರನ್ನು ನಿಪಿ-2 ರಿಂದ ನಿಪಿ-6 ಎಂದು ಹಾಗೂ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಿದ್ದು ಅದರಲ್ಲಿ ಇರುವ ಸಹಿಗಳನ್ನು ಗುರುತಿಸಿದ್ದು, ನಿಪಿ-1 ರಿಂದ 6 ರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ, ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

11. ಪ್ರಾಸಾ-1 ರವರು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಸರ್ಕಾರಿ ವಕೀಲರು ನ್ಯಾಯಾಲಯದ ಅನುಮತಿ ಮೇರೆಗೆ ಪ್ರಾಸಾ-1 ರವರನ್ನು ಅಭಿಯೋಜಕರು ಪಾಟೀ ಸವಾಲಿಗೊಳಪಡಿಸಿದ್ದು ಸದರಿ ಪಾಟೀ ಸವಾಲಿನಲ್ಲಿಯೂ ಸಹ ಪ್ರಾಸಾ-1 ರವರು ಆರೋಪಿಗಳ ವಿರುದ್ಧ ಯಾವುದೇ ಪ್ರಚೋದನಕಾರಿ ಸಾಕ್ಷ್ಯ ನುಡಿದಿರುವುದಿಲ್ಲ, ಸರ್ಕಾರಿ ಅಭಿಯೋಜಕರು ಕೇಳಿದ ಎಲ್ಲಾ ಪ್ರಶ್ನೆಗಳನ್ನು ಅಲ್ಲಗೆಳೆದಿರುತ್ತಾರೆ. ಪ್ರಾಸಾ-1 ರವರು ಮತ್ತು ಆರೋಪಿ ರಾಜಿ ಆಗಿರುವುದಾಗಿ ಒಪ್ಪಿರುತ್ತಾರೆ.

12. ನ್ಯಾಯಾಲಯವು ಪ್ರಾಸಾ-1 ರವರ ಸಂಪೂರ್ಣ ಸಾಕ್ಷ್ಯವನ್ನು ಪರಿಗಣಿಸಿ ನೋಡಿದಾಗ ಅಭಿಯೋಜನೆಯು ಆರೋಪಿಗಳ ವಿರುದ್ಧ ಮಾಡಿದ ಆರೋಪಣೆಯನ್ನು ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ ಹಾಗೂ ಪ್ರಾಸಾ-1ರವರು ಆರೋಪಿಗಳ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೇ ಇರುವುದರಿಂದ ಅಭಿಯೋಜನೆಯು ಭಾರತೀಯ ದಂಡ ಸಂಹಿತೆ ಕಲಂ 498(ಎ), 504, 323, 324, 506, 114, 506 ಸಹವಾಚಕ ಕಲಂ 34 ಹಾಗೂ 3 ಮತ್ತು 4 ವರದಕ್ಷಿಣೆ ನಿಷೇಧ ಕಾಯ್ದೆರಡಿಯಲ್ಲಿನ ಘಟಕಾಂಶಗಳನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಅಪರಾಧ ಮಾಡಿದ್ದಾರೆಂದು ಹೇಳುವಷ್ಟರ ಮಟ್ಟಿಗೆ ಯಾವುದೇ ಸಾಕ್ಷ್ಯಾಧಾರ ಇಲ್ಲದಿರುವುದರಿಂದ ಈ ನ್ಯಾಯಾಲಯವು ಮೇಲೆ ಹೇಳಿದ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.

13. **ಅಂಶಃ8-**ಮೇಲೆ ಹೇಳಿದ ವಸ್ತುಸ್ಥಿತಿ ಹಾಗೂ ಕಾರಣಗಳ ಆಧಾರದ ಮೇಲೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-ಃಆದೇಶಃ-**

ಬಿ.ಎನ್.ಎಸ್.ಎಸ್. ಕಲಂ 278(1) ರನ್ವಯ ಆರೋಪಿಗಳನ್ನು ಭಾರತೀಯ ದಂಡ ಸಂಹಿತೆ ಕಲಂ 498(ಎ), 323, 324, 504, 506, 114 ಸಹವಾಚಕ ಕಲಂ 34 ಹಾಗೂ 3 ಮತ್ತು 4 ವರದಕ್ಷಿಣೆ ನಿಷೇಧ ಕಾಯ್ದೆರಡಿಯಲ್ಲಿನ ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳಿಂದ ನಿರ್ದೋಷಿಗಳು ಎಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿಗಳ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರ ಉಕ್ತಲೇಖನ ನೀಡಿದ್ದು, ಆಕೆಯು ಗಣಕಯತ್ರದಲ್ಲಿ ಬೆರಳಚ್ಚು ಮಾಡಿದ್ದು, ತಪ್ಪುಗಳನ್ನು ತಿದ್ದುಪಡಿ ಮಾಡಿದ ನಂತರ **ದಿನಾಂಕ 2ನೇ ಜೂನ್ 2026** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

ಸಹಿ/-
(**ವಿನುತ ಡಿ.ಎಸ್.**)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ಮಡಿಕೇರಿ.

**--ಃ ಅನುಬಂಧ ಃ--**

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-**

| | |
|---|---|
| ಪ್ರಾಸಾ-1 | ಸೌಮ್ಯ ಎಸ್. |

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

| | |
|---|---|
| ನಿಪಿ-1 | ದೂರು |
| ನಿಪಿ-2 ರಿಂದ 6 | ಮಹಜರ್ ಗಳು |
| ನಿಪಿ-1(ಎ) ರಿಂದ 6(ಎ) | ಪ್ರಾಸಾ-1 ರವರ ಸಹಿಗಳು |
| ನಿಪಿ-7 | ಪ್ರಾಸಾ-1 ರವರ ಹೇಳಿಕೆ |

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ಮುದ್ದೆ ಮಾಲುಗಳುಃ-**

-ಇಲ್ಲ-

**ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿಗಳುಃ-**

-ಇಲ್ಲ-

**ಆರೋಪಿಗಳ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

-ಇಲ್ಲ-

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಮಡಿಕೇರಿ.